**<u>ಸಾಕ್ಷಿಯನ್ನು ದಿನಾಂಕ:25.11.2025ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಮತಿ ಜಿ ಆರ್ ಕೆ ವಕೀಲರಿಂದ:</u>**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಖಾಯಂ ಆಗಿ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಮದುವೆಗೂ ಮುನ್ನಾ ನನ್ನ ಖಾಯಂ ವಿಳಾಸ ಸೂರಪ್ಪನಳ್ಳಿ. ಈ ದಾವೇ ಹೂಡಲು ನಾನೇ ಮಾಹಿತಿ ನೀಡಿರುತ್ತೇನೆ. ದಾವೇಯನ್ನು ಹೂಡಲು ದಾಖಲೆಗಳನ್ನು ನಾನೇ ಸಂಗ್ರಹಿಸಿರುತ್ತೇನೆ. ದಾವಾ ಆಸ್ತಿಗಳ ಅಳತೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ನಾನು ಹೇಳಬಲ್ಲೆ.

2. ದಾವಾ ಐಟಂ ನಂ.1 ಸರ್ವೆ ನಂ.10/1 6 ಗುಂಟೆ ಇದ್ದು, ಪೂರ್ವಕ್ಕೆ ಕರೆಕಲ್ಲು, ಪಶ್ಚಿಮಕ್ಕೆ ಕರೆಕಲ್ಲು, ಉತ್ತರಕ್ಕೆ ನಾರಾಯಣಪ್ಪ ಮತ್ತು ದಕ್ಷಿಣಕ್ಕೆ ನಾರಾಯಣಪ್ಪ. ಸದರಿ ಚೆಕ್ಕುಬಂದಿಯನ್ನು ನಾನು ಯಾವುದೇ ದಾಖಲೆ ನೋಡದೇ ನನ್ನ ಜ್ಞಾನ ಮತ್ತು ಅನುಭವದ ಮೇಲೆ ಹೇಳಿರುತ್ತೇನೆ. ಸರ್ವೆ ನಂ.10 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ನಿಪಿ.10 ರಲ್ಲಿ ನಮೂದಾಗಿರುವ ಶಿವಕುಮಾರ ಬಿನ್ ನಂಜಯ್ಯ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಶಿವಕುಮಾರ್ ರವರು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ. ನಿಪಿ.9ರಲ್ಲಿ ನಮೂದಾಗಿರುವ ಹೆಚ್ ಎನ್ ನಾರಾಯಣ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಹೆಚ್ ಎನ್ ನಾರಾಯಣ ರವರು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿ.

3. ಐಟಂ ನಂ.2ರ ಆಸ್ತಿಯ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ್ ಗಳ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ತಾನು ದಾವೇ ಸಲ್ಲಿಸುವ ವಿಸ್ತೀರ್ಣ ತನಗೆ ಗೊತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಸರ್ವೇ ನಂಬರ್

ಗಳು ಯಾರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಬರುತ್ತಿವೆ ಎಂದು ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.